# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ. ಬೆಂಗಳೂರು

ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

: 080-23564444, 23464033 e-mail: ksccsfltd@gmail.com, info@ksccsf.org

www.ksccsf.org




## 2017-18ನೇ ಸಾಲಿನ
## ಸಾಮಾನ್ಯ ಸಭೆಯ ವಾರ್ಷಿಕ ವರದಿ
## ಮತ್ತು ಆರ್ಥಿಕ ತಃಖ್ತೆಗಳು

**ದಿನಾಂಕ: 05-07-2018 ಗುರುವಾರ ಬೆಳಗ್ಗೆ 11.00 ಘಂಟೆಗೆ**

**ಸ್ಥಳ**

**ಕೆ.ಇ.ಬಿ ಇಂಜಿನಿಯರ್ಸ್ ಅಸೋಸಿಯೇಷನ್, ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ,**
**ಸಿಲ್ವರ್ ಜುಬಿಲಿ ಬಿಲ್ಡಿಂಗ್, ನಂ.28, ರೇಸ್‌ಕೋರ್ಸ್ ಕ್ರಾಸ್ ರಸ್ತೆ,**
**ಆನಂದರಾವ್ ಸರ್ಕಲ್ ಹತ್ತಿರ, ಬೆಂಗಳೂರು-560009**

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ. ಬೆಂಗಳೂರು

ನಂ.16, 1ನೇ ಮಹಡಿ, 1ನೇ ಕ್ರಾಸ್, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

## 14ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ. ಬೆಂಗಳೂರು ಇದರ **2017-18ನೇ** ಸಾಲಿನ 14ನೇ ವಾರ್ಷಿಕ ಸಾಮಾನ್ಯ ಸಭೆಯನ್ನು, ದಿನಾಂಕ:05-07-2018 ಗುರುವಾರ ಬೆಳಗ್ಗೆ 11.00 ಘಂಟೆಗೆ **ಕೆ.ಇ.ಬಿ ಇಂಜಿನಿಯರ್ಸ್ ಅಸೋಸಿಯೇಷನ್, ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ, ಸಿಲ್ವರ್ ಜುಬಿಲಿ ಬಿಲ್ಡಿಂಗ್, ನಂ.28, ರೇಸ್‌ಕೋರ್ಸ್ ಕ್ರಾಸ್ ರಸ್ತೆ, ಆನಂದರಾವ್ ಸರ್ಕಲ್ ಹತ್ತಿರ, ಬೆಂಗಳೂರು-560009** ಇಲ್ಲಿ **ಅಧ್ಯಕ್ಷರಾದ ಶ್ರೀ** ಸಿ.ಎಂ.ಮಾರೇಗೌಡ ಇವರ ಅಧ್ಯಕ್ಷತೆಯಲ್ಲಿ ಕಾರ್ಯಸೂಚಿಯಲ್ಲಿ ಸೂಚಿಸಿರುವ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಲು ಕರೆಯಲಾಗಿದೆ. ಸದಸ್ಯ ಸಂಘಗಳ ಮಾನ್ಯ ಪ್ರತಿನಿಧಿಗಳು ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

### -:ಕಾರ್ಯಸೂಚಿ:-

1. ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
2. ದಿನಾಂಕ:28-06-2017 ರಂದು ನಡೆದ 13ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.
3. 2017-2018ನೇ ಸಾಲಿನ ಆಡಳಿತ ವರದಿಯನ್ನು ಪರಿಶೀಲಿಸಿ ಅನುಮೋದಿಸುವುದು.
4. 2017-2018ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪರಿಶೋಧನಾ ವರದಿ, ಆರ್ಥಿಕ ಲೆಕ್ಕ ತಃಖ್ತೆಗಳನ್ನು ಹಾಗೂ ಆಡಳಿತ ಮಂಡಳಿ ನೀಡಿರುವ ಅನುಪಾಲನಾ ವರದಿಯನ್ನು ಅನುಮೋದಿಸುವುದು.
5. 2018-2019ನೇ ಸಾಲಿನ ಲೆಕ್ಕಪರಿಶೋಧನೆಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಕ ಮಾಡುವುದು ಮತ್ತು ಅವರಿಗೆ ಸಂಭಾವನೆಯನ್ನು ನಿಗದಿಪಡಿಸುವುದು.
6. 2019-2020ನೇ ಸಾಲಿನ ಮುಂಗಡ ಪತ್ರ (ಆಯ-ವ್ಯಯ ಪಟ್ಟಿ) ಮಂಜೂರು ಮಾಡುವುದು ಮತ್ತು 2017-18ನೇ ಸಾಲಿಗೆ ಮಂಜೂರಾಗಿದ್ದ ಬಜೆಟ್‌ಗಿಂತ ಹೆಚ್ಚಿಗೆ ಖರ್ಚಾಗಿರುವ ಮೊಬಲಗಿಗೆ ಅನುಮೋದನೆ ನೀಡುವುದು.
7. 2017-18ನೇ ಸಾಲಿನ ಹೆಚ್ಚುವರಿ ಉಳಿಕೆ ಮೊಬಲಗನ್ನು ನಿಧಿಗೆ ವರ್ಗಾಯಿಸುವುದು.
8. ಸದಸ್ಯ ಸಂಘಗಳ ಪ್ರತಿನಿಧಿಗಳಿಂದ ಬಂದ ಸಲಹೆ/ಸೂಚನೆಗಳನ್ನು ಪರಿಶೀಲಿಸುವುದು.
9. ಇತರೆ ವಿಷಯಗಳ ಬಗ್ಗೆ ಚರ್ಚೆ ಮತ್ತು ತೀರ್ಮಾನ.

ಆಡಳಿತ ಮಂಡಳಿ ಅನುಮತಿ ಮೇರೆಗೆ

ಸ್ಥಳ: ಬೆಂಗಳೂರು
ಪಿ.ಆಶಾಲತಾ
ದಿನಾಂಕ:12-06-2018
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

## ವಿಶೇಷ ಸೂಚನೆಗಳು

1. ಸದಸ್ಯ ಸಂಘಗಳ ಪ್ರತಿನಿಧಿಯು ವಾರ್ಷಿಕ ಸಾಮಾನ್ಯ ಸಭೆಗೆ ಬರುವಾಗ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಪ್ರತಿನಿಧಿಯನ್ನು ಆಯ್ಕೆ ಮಾಡಿದ ಠರಾವಿನ ದೃಢೀಕರಣ ಪ್ರತಿ ಹಾಗೂ ಈ ವರದಿ ಪುಸ್ತಕವನ್ನು ಕಡ್ಡಾಯವಾಗಿ ತರುವುದು.

2. ಪ್ರತಿನಿಧಿಗಳು ಸಭಾಂಗಣಕ್ಕೆ ಪ್ರವೇಶಿಸುವುದಕ್ಕೆ ಮೊದಲು ಸಂಘದ ಆಡಳಿತ ಮಂಡಲಿ ಸಭೆಯ ನಿರ್ಣಯದ ಪ್ರತಿಯನ್ನು ಹಾಜರುಪಡಿಸಿ ವಾರ್ಷಿಕ ಸಾಮಾನ್ಯ ಸಭೆಯ ಹಾಜರಾತಿ ಪುಸ್ತಕದಲ್ಲಿ ತಮ್ಮ ಹೆಸರು, ನಿರ್ವಹಿಸುತ್ತಿರುವ ಹುದ್ದೆ ಮತ್ತು ಪ್ರತಿನಿಧಿಸಿದ ಸಂಘದ ಹೆಸರನ್ನು ನಮೂದಿಸಿ ಸಹಿ ಮಾಡಬೇಕು. ಆಡಳಿತ ಮಂಡಳಿ ಸದಸ್ಯರು ಪ್ರತಿನಿಧಿಯಾಗಿ ಸಭೆಯಲ್ಲಿ ಭಾಗವಹಿಸಬೇಕು ಹಾಗೂ **ನಮೂನೆ–ಎ ರಲ್ಲಿ ತಿಳಿಸಿರುವಂತೆ ಆಡಳಿತಮಂಡಳಿ ಪ್ರತಿನಿಧಿಯು ತಮ್ಮ ಸಂಘದ ಲೆಟರ್‌ಹೆಡ್‌ನಲ್ಲಿ ಮಾಹಿತಿ ನೀಡಿರಬೇಕು. ಪ್ರತಿನಿಧಿಯ ಭಾವಚಿತ್ರಕ್ಕೆ ಮುಖ್ಯಕಾರ್ಯನಿರ್ವಹಣಾಧಿಕಾರಿ ರವರು ಸಹಿ ಮಾಡಿ ದೃಢೀಕರಿಸಿರಬೇಕು.**

3. ಪ್ರತಿನಿಧಿಗಳು ಮಹಾಮಂಡಳದ ಕಾರ್ಯಚಟುವಟಿಕೆ ಮತ್ತು ಆರ್ಥಿಕ ಲೆಕ್ಕತಃಖ್ತೆಗಳಲ್ಲಿನ ಮಾಹಿತಿ ಕುರಿತು ಸ್ಪಷ್ಟೀಕರಣ ಬಯಸಿದ್ದಲ್ಲಿ ಸಾಮಾನ್ಯ ಸಭೆಗೆ 5 ದಿನಗಳ ಮುಂಚಿತವಾಗಿ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ಅರ್ಜಿ ಸಲ್ಲಿಸಿರಬೇಕು.

4. ತಮ್ಮ ಸಂಘದ ನೋಂದಣಿ ವಿಳಾಸ ಬದಲಾವಣೆ ಆಗಿದ್ದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ವಿಳಾಸವನ್ನು ಮಹಾಮಂಡಳಕ್ಕೆ ಲಿಖಿತ ಮೂಲಕ ನೀಡುವುದು.

5. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ 2012 ಕಲಂ 27(ಎ)ಮತ್ತು ಬೈಲಾ ನಂ.10ರಂತೆ ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಸಭೆಗಳಿಗೆ ಗೈರುಹಾಜರಾದ ಮತ್ತು ಮಹಾಮಂಡಳವು ದೊರಕಿಸಿಕೊಡುವಂಥ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳದ ಸದಸ್ಯ ಸಂಘಗಳ ಪ್ರತಿನಿಧಿಗಳು ಮಹಾಮಂಡಳದ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವುದಕ್ಕೆ, ಮತ ಚಲಾಯಿಸುವುದಕ್ಕೆ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಅರ್ಹತೆ ಇರುವುದಿಲ್ಲ. ಆದಕಾರಣ ಸದಸ್ಯ ಸಂಘಗಳ ಪ್ರತಿನಿಧಿಗಳು ಮಹಾಮಂಡಳದ ಎಲ್ಲಾ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಭಾಗವಹಿಸುವುದು ಮತ್ತು ಮಹಾಮಂಡಳ ನೀಡುವ ಕನಿಷ್ಠ ಸೇವೆಗಳನ್ನು ಹಾಗೂ ಸೌಲಭ್ಯಗಳನ್ನು ಪಡೆದುಕೊಳ್ಳುವುದು.

6. ಸದಸ್ಯ ಸಂಘಗಳಿಗೆ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರು ಇದರ ಮೂಲಕ ಇ–ಸ್ಟಾಂಪಿಂಗ್ ಪರವಾನಗಿ ಮಂಜೂರು ಮಾಡಿಸಿಕೊಡುತ್ತಿದ್ದು, ಸದಸ್ಯ ಸಂಘಗಳ ಪದಾಧಿಕಾರಿಗಳು ಮಹಾಮಂಡಳದ ಕಛೇರಿಯಲ್ಲಿ ಮಾಹಿತಿ ಪಡೆದುಕೊಂಡು ಇ–ಸ್ಟಾಂಪಿಂಗ್ ಪರವಾನಗಿ ಪಡೆದುಕೊಳ್ಳುವುದು.

7. ಸಾಮಾನ್ಯ ಸಭೆಗೆ ಹಾಜರಾಗುವ ಪ್ರತಿನಿಧಿಗಳಿಗೆ ಮಧ್ಯಾಹ್ನ 1–00 ಘಂಟೆಗೆ ಊಟದ ವ್ಯವಸ್ಥೆ ಏರ್ಪಡಿಸಲಾಗಿದೆ.

8. **ಇ–ಸ್ಟಾಂಪಿಂಗ್ ಉಪಕೇಂದ್ರ ಪರವಾನಗಿ ಪಡೆದಿರುವ ಸಹಕಾರ ಸಂಘಗಳಿಗೆ ಇ–ಸ್ಟಾಂಪಿಂಗ್ ಪ್ರಮಾಣ ಪತ್ರಗಳನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿತರಿಸುತ್ತಿದ್ದು, ಇ–ಸ್ಟಾಂಪಿಂಗ್ ಉಪಕೇಂದ್ರ ಹೊಂದಿರುವ ಸಹಕಾರ ಸಂಘಗಳು ಕಡ್ಡಾಯವಾಗಿ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ಸೂಚಿಸಿದೆ (ಮಾದರಿ ಅನ್ವಯ)**

9. **ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ.21(2)(ಎ)ರಂತೆ ಆಡಳಿತ ಮಂಡಳಿ ಸದಸ್ಯರು ಮಾತ್ರ ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಲು ಅವಕಾಶವಿರುತ್ತದೆ.**

ಆಡಳಿತ ಮಂಡಳಿ ಅನುಮತಿ ಮೇರೆಗೆ
ಪಿ.ಆಶಾಲತಾ
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಸ್ಥಳ: ಬೆಂಗಳೂರು
ದಿನಾಂಕ:12–06–2018

# ನಮೂನೆ ಎ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಸದಸ್ಯ ಸಂಘದ ಆಡಳಿತ ಮಂಡಳಿ ಪ್ರತಿನಿಧಿಯು ಸಹಕಾರ ಸಂಘಗಳ ಕಾಯ್ದೆ 1959 ಕಲಂ.29(2)(ಎ) ಪ್ರಕಾರ ನೀಡಬೇಕಾದ ಮಾಹಿತಿ.

1. ಸಂಘದ ಹೆಸರು ಮತ್ತು ಪೂರ್ಣ ವಿಳಾಸ ____________________

   ____________________ ಜಿಲ್ಲೆ __________

   ಪಿನ್ ಕೋಡ್ __________ ದೂರವಾಣಿ ಸಂಖ್ಯೆ ____________________

2. ಪ್ರತಿನಿಧಿಯ ಹೆಸರು ____________________

   ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು

   ವಿಳಾಸ ____________________

   ____________________

3. ದಿನಾಂಕ:05-07-2018 ರಂದು ನಡೆಯುವ ಮಹಾಮಂಡಳದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ದಿನಾಂಕ__________ರಂದು ನಡೆದ ಸಂಘದ ಆಡಳಿತಮಂಡಳಿ ನಿರ್ಣಯಿಸಿದ ಠರಾವು ಪ್ರತಿಯನ್ನು ಲಗತ್ತಿಸಿರಬೇಕು.

| ಪ್ರತಿನಿಧಿಯ ಭಾವಚಿತ್ರ |
|---|

__________
ಪ್ರತಿನಿಧಿಯ ಸಹಿ

"ದೃಢೀಕರಿಸಿದೆ"

ಮುಖ್ಯಕಾರ್ಯನಿರ್ವಹಣಾಧಿಕಾರಿ ಸಹಿ
ಸಂಘದ ಮೊಹರಿನೊಂದಿಗೆ

ವಿ.ಸೂ:- 1. ಎಲ್ಲಾ ಕಾಲಂಗಳನ್ನು ತುಂಬಿರಬೇಕು.
2. ಈ ನಮೂನೆ ಸಂಘದ ಲೆಟರ್ ಹೆಡ್‌ನಲ್ಲಿರಬೇಕು.

# ಮಾದರಿ

ಇಂದ,

– – – – – – – – – – – – – –
– – – – – – – – – – – – – –
– – – – – – – – – – – – – –
– – – – – – – – – – – – – –

ಗೆ,
ಅಧ್ಯಕ್ಷರು/ಮುಖ್ಯಕಾರ್ಯನಿರ್ವಹಣಾಧಿಕಾರಿಗಳು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳ ನಿ., ಮಲ್ಲೇಶ್ವರಂ, ಬೆಂಗಳೂರು–03

ಮಾನ್ಯರೇ

ದಿನಾಂಕ: 05–07–2018 ರಂದು ನಡೆದ ಮಹಾಮಂಡಳದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಮ್ಮ ಸಹಕಾರ ಸಂಘದ/ಶಾಖೆಯ ಇ–ಸ್ಟಾಂಪಿಂಗ್ ಉಪಕೇಂದ್ರದ ಪ್ರಮಾಣ ಪತ್ರವನ್ನು ಸ್ವೀಕರಿಸಲಾಗಿದೆ.

ಸಹಿ/–
ಮುಖ್ಯಕಾರ್ಯನಿರ್ವಹಣಾಧಿಕಾರಿ
(ಸಂಘದ ಮುದ್ರೆಯೊಂದಿಗೆ)